1. ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)

2. ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ : 295

3. : (ಶ್ರೀ ಶೋಭಾ ಕರಂದ್ಲಾಜೆ)

ಅ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಂದಿನಿಂದ ಜಾರಿಗೆ ತರಲಾಗಿದೆ. ಕೇಂದ್ರ ಸರ್ಕಾರದಿಂದ ಇಲ್ಲಿಯವರೆವಿಗೆ ಇದಕ್ಕಾಗಿ ರಾಜ್ಯಕ್ಕೆ ಬಂದಿರುವ ಹಣವೆಷ್ಟು;

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಮೊದಲನೆಯ ಹಂತದಲ್ಲಿ ದಿನಾಂಕ:2-2-2006ರಿಂದ ಬೀದರ್, ಗುಲ್ಬರ್ಗ, ಚಿತ್ರದುರ್ಗ, ರಾಯಚೂರು ಮತ್ತು ದಾವಣಗೆರೆ ಈ ಐದು ಜಿಲ್ಲೆಗಳಲ್ಲಿ, ದಿನಾಂಕ:1-4-2007ರಿಂದ ಎರಡನೇ ಹಂತದ ಬಳ್ಳಾರಿ, ಬೆಳಗಾಂ,ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಮತ್ತು ಕೊಡಗು ಈ ಆರು ಜಿಲ್ಲೆಗಳಲ್ಲಿ, ದಿನಾಂಕ:1-4-2008ರಿಂದ ಉಳಿದ 18 ಜಿಲ್ಲೆಗಳಲ್ಲಿ ಜಾರಿಗೆ ಬಂದಿರುತ್ತದೆ.

ಕೇಂದ್ರ ಸರ್ಕಾರದಿಂದ ಈವರೆಗೂ ರಾಜ್ಯಕ್ಕೆ ಬಂದಿರುವ ಅನುದಾನದಿಂದ ವಿವರಗಳು ಈ ಕೆಳಗಿನಂತೆ ಇವೆ:

(ಕೋಟಿ ರೂ.ಗಳಲ್ಲಿ)

ಕ್ರ ಸಂ.	ವರ್ಷ	ಸ್ವೀಕರಿಸಲಾದ ಅನುದಾನ
1	2006-07	242.50
2	2007-08	268.52
3	2008-09	165.84
	ಒಟ್ಟು:	**676.86**

ಆ) ಇಲ್ಲಿಯವರೆವಿಗೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಇಲ್ಲಿಯವರೆಗೂ ಜಿಲ್ಲಾವಾರು ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ರಾಜ್ಯದಲ್ಲಿ ಯಾವ ಯಾವ ಜಿಲ್ಲಾ ಪಂಚಾಯ್ತಿಗಳು ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿವೆ;

ಮೂರನೇ ಹಂತದ 18 ಜಿಲ್ಲೆಗಳನ್ನು ಹೊರತುಪಡಿಸಿ ಇನ್ನುಳಿದ ಜಿಲ್ಲಾ ಪಂಚಾಯತಿಗಳು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿವೆ. ಮೂರನೇ ಹಂತದ ಜಿಲ್ಲೆಗಳಲ್ಲಿ ಅನುಷ್ಠಾನ ಸ್ವಲ್ಪ ತಡವಾಗಿ ಪ್ರಾರಂಭವಾಗಿದೆ.

ಈ) ಈ ಯೋಜನೆ ಜಾರಿಯಾದಾಗಿನಿಂದ ಇಲಾಖೆಯ ಸಚಿವರು/ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು ಯಾವ ಯಾವ ಜಿಲ್ಲೆಗೆ ಭೇಟಿ ನೀಡಿ ಈ ಯೋಜನೆಯ ಪ್ರಗತಿ ಬಗ್ಗೆ ಪರಿಶೀಲನೆ ನಡೆಸಲಾಗಿರುವುದು (ಪೂರ್ಣ ವಿವರಗಳನ್ನು ಒದಗಿಸುವುದು);

ಮೊದಲ ಮತ್ತು ಎರಡನೆಯ ಹಂತದ ಜಿಲ್ಲೆಗಳಿಗೆ ಇಲಾಖೆಯ ಸಚಿವರು, ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು ಭೇಟಿ ನೀಡಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿರುತ್ತಾರೆ. ಮೂರನೆಯ ಹಂತದ ಜಿಲ್ಲೆಗಳ ಪೈಕಿ ಮೈಸೂರು, ಉತ್ತರ ಕನ್ನಡ, ಚಾಮರಾಜನಗರ, ಧಾರವಾಡ, ಗದಗ, ಮಂಡ್ಯ ಮತ್ತು ಹಾವೇರಿ ಜಿಲ್ಲೆಗಳಿಗೆ ಸರ್ಕಾರದ ಕಾರ್ಯದರ್ಶಿಗಳು ಭೇಟಿ ನೀಡಿ ಪ್ರಾರಂಭಿಕ ಕಾರ್ಯಗಳನ್ನು ಪರಿಶೀಲಿಸಿರುತ್ತಾರೆ.

ಉ) ಕೆಲವು ಜಿಲ್ಲಾ ಪಂಚಾಯ್ತಿ ಸಿ.ಎ.ಓ.ಗಳ ಮೇಲೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಭ್ರಷ್ಟಾಚಾರ ಹಾಗೂ ಅವ್ಯವಹಾರಗಳು ನಡೆದಿರುವ ಬಗ್ಗೆ ಸರ್ಕಾರಕ್ಕೆ ದೂರು ಅರ್ಜಿಗಳು ಬಂದಿರುವುದು ನಿಜವೇ;

ನಿಜ.

ಊ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲಾ ಪಂಚಾಯ್ತಿಗಳ ಸಿ.ಇ.ಓ.ಗಳ ಬಗ್ಗೆ ಈ ದೂರುಗಳು ಬಂದಿವೆ; ಇದರ ವಿವರಗಳೇನು; ಸರ್ಕಾರ ಈ ದೂರುಗಳ ಆಧಾರದ ಮೇಲೆ ಸಂಬಂಧಪಟ್ಟವರ ಮೇಲೆ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಂಡಿದೆ. ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರದ ಮುಂದಿರುವ ಕ್ರಮವೇನು?

ಅಂದಿನ ಬೀದರ್ ಮತ್ತು ರಾಯಚೂರು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮೇಲೆ ಆಡಳಿತಾತ್ಮಕ ದೂರುಗಳು ಬಂದಿದ್ದು, ಅವರುಗಳು ವರ್ಗಾವಣೆಯಾಗಿರುವುದರಿಂದ ಮತ್ತು ಯಾವುದೇ ಹಣಕಾಸಿನ ಅವ್ಯವಹಾರ, ಆರೋಪ ಇಲ್ಲದೇ ಇರುವುದರಿಂದ ಶಿಸ್ತಿನ ಕ್ರಮದ ಪ್ರಶ್ನೆ ಉದ್ಭವಿಸುವುದಿಲ್ಲ. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರವು ಬದ್ಧವಾಗಿದೆ.

LAQ No. 488

ANNEXURE

STATEMENT SHOWING THE DETAILS OF THE RELEASE OF CENTRAL AND STATE MADE SOFAR UNDER NREGA TO THE DISTRICTS IN THE STATE

KARNATAKA STATE **(Rs.in lakhs)**

Sl. No	District	2006–07			2007–08			2008–09			Total Releases		
		Central	State	Total	Central	State	Total	Central	State	Total	Central (col.3 +6+9)	State (col.4 +7+10)	Total (col.5 +8+11)
1	2	3	4	5	6	7	8	9	10	11	12	13	14
1	Bidar	2313.01	102.138	2415.15	2000.00	326.36	2326.36	1468.61	158.00	1626.61	5781.62	586.50	6368.12
2	Gulbarga	3602.23	474.06	4076.29	2525.73	268.68	2794.41	2738.39	273.84	3012.23	8866.35	1016.58	9882.93
3	Raichur	2289.68	316.04	2605.72	2559.30	255.93	2815.23	3796.23	379.62	4175.85	8645.21	951.59	9596.80
4	Davangere	6859.91	479.86	7339.77	3098.99	397.38	3496.37	2164.4	332.62	2497.02	12123.30	1209.86	13333.16
5	Chitradurga	9185.56	661.65	9847.21	4534.80	454.84	4989.64	941.67	402.71	1344.38	14662.03	1519.20	16181.23
Total		**24250.39**	**2033.75**	**26284.14**	**14718.82**	**1703.19**	**16422.01**	**11109.30**	**1546.79**	**12656.09**	**50078.51**	**5283.73**	**55362.24**
6	Bellary				1688.00	162.95	1850.95	0.00	0.00	0.00	1688.00	162.95	1850.95

7	Belgaum				4106.91	212.59	4319.50	0.00	192.25	192.25	4106.91	404.84	4511.75
8	Chikkamagalur				1411.47	132.42	1543.89	0.00	2.88	2.88	1411.47	135.30	1546.77
9	Hassan				2111.01	204.06	2315.07	500.00	51.19	551.19	2611.01	255.25	2866.26
10	Kodagu				829.53	77.10	906.63	0.00	0.00	0.00	829.53	77.10	906.63
11	Shimoga				1986.66	117.46	2104.12	500.00	125.36	625.36	2486.66	242.82	2729.48
	Total				**12133.58**	**906.58**	**13040.16**	**1000.00**	**371.68**	**1371.68**	**13133.58**	**1278.26**	**14411.84**
12	Bangalore(U)							239.29	23.93	263.22	239.29	23.93	263.22
13	Bangalore(R)							308.20	30.82	339.02	308.20	30.82	339.02
14	Bagalkot							224.78	22.478	247.258	224.78	22.48	247.26
15	Bijapur							263.35	26.335	289.685	263.35	26.34	289.69
16	Chamarajanagar							213.64	21.364	235.004	213.64	21.36	235.00
17	D.Kannada							158.17	15.817	173.987	158.17	15.82	173.99
18	Dharwad							158.67	15.967	174.637	158.67	15.97	174.64
19	Gadag							171.00	17.10	188.1	171.00	17.10	188.10
20	Haveri							211.89	21.89	233.079	211.89	21.19	233.08

21	Kolar							542.28	54.228	596.508	542.28	54.23	596.51
22	Koppal							199.25	19.925	219.175	199.25	19.93	219.18
23	Mandya							190.88	19.088	209.968	190.88	19.09	209.97
24	Mysore							262.58	26.258	288.38	262.58	26.26	288.84
25	Tumkur							464.75	46.475	511.225	464.75	46.48	511.23
26	Udupi							133.17	13.317	146.487	133.17	13.32	146.49
27	U.Kannada							235.04	23.504	258.544	235.04	23.50	258.54
28	Ramanagar							248.50	24.85	273.35	248.50	24.85	273.35
29	Chikkabalapur							248.50	24.85	273.35	248.50	24.85	273.35
Total					**12133.58**	**906.58**	**13040.16**	**4473.94**	**447.49**	**4921.43**	**4473.94**	**447.49**	**4921.43**
Grand Total		**24250.39**	**2033.75**	**26284.14**	**26852.40**	**2609.77**	**29462.17**	**16583.24**	**2365.96**	**18949.20**	**67686.03**	**7009.49**	**74695.52**